O.S.8- 2020
.D.W.-1

<u>ಸಾಕ್ಷಿಯನ್ನು ದಿನಾಂಕ **30-03-2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **1** ರಿಂದ **5** ರ ಪರ ಶ್ರೀ ಡಿ.ಎನ್.ಹೆಚ್ . ವಕೀಲರಿಂದ</u>

ಮತದಾರರ ಪಟ್ಟಿಯನ್ನು ನಿಡಿಃ**31** ಎಂದು, ಅದರಲ್ಲಿನ ಪುಟ ಸಂಖ್ಯೆ **5** ರಲ್ಲಿ ಇರುವ ಕ್ರ.ಸಂಖ್ಯೆ **294** ರಿಂದ **320** ರವರೆಗಿನ ನಮೂದನ್ನು ನಿಡಿಃ**31** ಎ ಎಂದು ಗುರುತಿಸಲಾಯಿತು. ನಾನು ಈ ಪ್ರಕರಣದಲ್ಲಿ **1, 3** ರಿಂದ **5** ನೇ ಪ್ರತಿವಾದಿಯರ ಪರವಾಗಿ ಸಹ ಸಾಕ್ಷ್ಯನುಡಿಯುತ್ತಿದ್ದೇನೆ.

<u>ಮುಂದುವರೆದ ಪಾಟೀ ಸವಾಲು</u> ಃ ವಾದಿ ಪರ ಶ್ರೀ.ಎಸ್ ಎನ್.ಆರ್ ವಕೀಲರಿಂದಃ-

**7)** ಸೂರ್ಯ ನಾರಾಯಣಭಟ್ ರವರು **1970** ರಲ್ಲಿನ ದಾವೆ ವಜಾ ಗೊಂಡ ಆದೇಶದ ವಿರುದ್ಧ ಯಾವ ನ್ಯಾಯಾಲಯದಲ್ಲಿ ಏನೂ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದು ಅವುಗಳ ನಂಬರು ಹಾಗೂ ವಜಾಗೊಂಡ ದಿನಾಂಕ ಈಗ ನೆನಗೆ ಹೇಳಲು ಸಾದ್ಯ ಇಲ್ಲ. ಆ ಮೇಲ್ಮನವಿಗಳ ದಾಖಲೆಗಳನ್ನು ಪಡೆದು ತಂದು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಉಚ್ಛ ನ್ಯಾಯಾಲಯದಲ್ಲಿ ಸಹ ಪ್ರಕರಣ ದಾಖಲು ಮಾಡಿರುತ್ತಾರೆ ಅದರ ನಂಬರು ಹಾಗೂ ವಿವರಗಳು ನನಗೆ ಗೊತ್ತಿಲ್ಲ. ನಾನು ನನ್ನ ಲಿಖಿತ ಹೇಳಿಕೆ ಹಾಗೂ ಪ್ರಮಾಣಪತ್ರವನ್ನು ಪರೀಶಿಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಲಿಖಿತ ಹೇಳಿಕೆ ಹಾಗೂ ಪ್ರಮಾಣಪತ್ರದಲ್ಲಿ ಸೂರ್ಯನಾರಾಯಣಭಟ್ ರವರು ಸಲ್ಲಿಸಿದ ದಾವೆಗಳಲ್ಲಿ ಈ ದಾವೆ ಬಿ ಅನುಸೂಚಿತ ಸ್ವತ್ತುಗಳ ಸ್ವಾಧೀನ ಕೋರಿ ದಾಖಲಿಸಿದ್ದರು ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ನಿಡಿಃ**10** ರಿಂದ **27** ರ ದಾಖಲೆಗಳಲ್ಲಿರುವ ದಾವಾ ಅನುಸೂಚಿಗಳನ್ನು ನೋಡಿರುತ್ತೇನೆ. ನಿಡಿ**10** ರಿಂದ **27** ರಲ್ಲಿ ಸ್ವತ್ತುಗ್ಗಳ ಅಳತೆ ಹಾಗೂ ವಿವರ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವ ಆಧಾರದಲ್ಲಿ ಹಿಂದೆ ಸೂರ್ಯನಾರಾಯಣಭಟ್‌ರವರು ಸಲ್ಲಿಸಿದ ದಾವೆಗಳಲ್ಲಿ ದಾವಾ ಬಿ ಅನಸೂಚಿ ಸ್ವತ್ತಿನ ಸ್ವಾಧೀನ ಕೇಳಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದು ನನಗೆ ಹೇಳಲು

ಸಾಧ್ಯವಿಲ್ಲ. ಸಾಕ್ಷಿ ಮುಂದುವರೆದು ಮುನ್ಸಿಪ. ನ್ಯಾಯಾಲಯದಿಂದ ಬಂದು ಮಾಡಿದ ಅಳತೆಯ ಆಧಾರದಲ್ಲಿ ಹೇಳುತ್ತಿದ್ದೇನೆ ಎನ್ನುತ್ತಾರೆ. ಆ ಅಳತೆ ಮಾಡಿದ ಸ್ವತ್ತುಗಳ ವಿವರ ನಿಡಿ10 ರಿಂದ 27 ರ ಅನುಸೂಚಿಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ28 ರ ಆಧಾರದಲ್ಲಿ ದಾವಾ ಬಿ ಅನಸೂಚಿತ ಹಾಗೂ 1970 ರ ದಾವೆಗಳಲ್ಲಿನ ಅನುಸೂಚಿ ಸ್ವತ್ತುಗಳು ಒಂದೇ ಎಂದು ಹೇಳುತ್ತಿದ್ದೇನೆ. ನಿಡಿ28 ರ ಲ್ಲಿ ಈ ದಾವೆಯಲ್ಲಿನ ಯಾವುದೇ ಪ್ರತಿವಾದಿಗಳ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಅವರೆಲ್ಲರೂ ಸತ್ತು ಹೋಗಿರುತ್ತಾರೆ ಎನ್ನುತ್ತಾರೆ. ನಿಡಿಃ28 ರಲ್ಲಿ ಪಕ್ಷಗಾರರು ಸ್ವಾಧೀನದಲ್ಲಿದ್ದಾರೆ ಎಂದು ತೋರಿಸಿರುವ ಸ್ವತ್ತುಗಳಿಗೆ ಚಕ್ಕುಬಂಧಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಆ ಸ್ವತ್ತುಗಳು ಈ ದಾವಾ ಬಿ ಅನುಸೂಚಿ ಸ್ವತುಗಳು ಒಂದೇ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

8) ದಾವಾ ಬಿ. ಅನುಸೂಚಿ ಸ್ವತ್ತಿನ ಮಾಲೀಕರು ಯಾರು ಎಂದು ನನಗೆ ಹೇಳಲು ಸಾಧ್ಯ ಇಲ್ಲ. 1 ರಿಂದ 6 ನೇ ಪ್ರತಿವಾದಿಗಳು ಆ ಸ್ವತ್ತಿನಲ್ಲಿ ಯಾವ ದಿನಾಂಕದಿಂದ ಸ್ವಾಧೀನದಲ್ಲಿ ಇರುತ್ತಾರೆ ಎಂದು ನನಗೆ ಹೇಳಲು ಸಾಧ್ಯ ಇಲ್ಲ. ದಾವಾ ಬಿ. ಅನುಸೂಚಿ ಸ್ವತ್ತಿನ ವಿವರಣೆಗಳನ್ನು ನಾನು ನನ್ನ ವಕೀಲರಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ನಾವು ನಮ್ಮ ತಂದೆಯಂದಿರ ಕಾಲದಿಂದಲೂ ಆ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತೇವೆ. ಅವುಗಳ ಒಡೆತನದ ಬಗ್ಗೆ ಖಾನೆಶುಮಾರಿ ದಾಖಲೆಗಳು ಇರುತ್ತದೆ. ಯಾವ ಆಧಾರದ ಮೇಲೆ ಖಾನೆಶುಮಾರಿ ದಾಖಲೆಗಳನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಹಾಜರುಪಡಿಸಿದ ಹದ್ದುಬಸ್ತು ದಾಖಲೆಗಳನ್ನು ನಾನು ನೋಡಿರುತ್ತೇನೆ ಸಾಕ್ಷಿ ಮುಂದುವರೆದು ಆ ರೀತಿ ಯಾವುದೇ ಹದ್ ಬಸ್ತು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿಃ9 ರ ದಾಖಲೆಯನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಆ ದಾಖಲೆ ಆದ ಬಗ್ಗೆ ನಮಗೆ ಗೊತ್ತೆ ಇಲ್ಲದೇ ಇದ್ದ ಕಾರಣ ಪ್ರಶ್ನೆ ಮಾಡಿರುವುದಿಲ್ಲ. ನಿಪಿಃ9 ರಲ್ಲಿ ಕೆಂಪು ಬಣ್ಣದಲ್ಲಿ ಒತ್ತುವರಿ ಆಗಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಾಗುವುದಿಲ್ಲ. 1 ರಿಂದ 3 ಮತ್ತು 6 ನೇ ಪ್ರತಿವಾದಿಯರಿಗೆ ದಾವಾ ಬಿ ಅನುಸೂಚಿ ಸ್ವತ್ತು ಗಳನ್ನು ಹೊರುತಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಯರಿಗೆ ಬೇರೆ ಆಸ್ತಿಗಳು ಇರುತ್ತದೆ. 1 ನೇ ಪ್ರತಿವಾದಿ ನನ್ನ ಹತ್ತಿರದ ಸಂಬಂಧಿಕರಾಗಿರುತ್ತಾರೆ. ಅವರಿಗೆ ಡಿ.ಆರ್ 174 ರಲ್ಲಿ ಮನೆ ಇದೆ ಎಂದರೆ ಸಾಕ್ಷಿ ಅಲ್ಲಿ ಮನೆ ಇರುವುದಿಲ್ಲ ಖಾಲಿ ಜಾಗ ಇರುತ್ತದೆ ಎನ್ನುತ್ತಾರೆ. ಅದು ಬಿ ಅನುಸೂಚಿ ಸ್ವತನ್ನು ಹೊರತುಪಡಿಸಿ ಬೇರೆ ಇರುತ್ತದೆ ಎಂದರೆ ಸರಿ. ನಾನು

ಇಂಡಿಯನ್ ಗ್ಯಾಸ್ ಏಜೆನ್ಸಿ ಹೊಂದಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅರಣ್ಯ ಇಲಾಖೆಯವರು ಗ್ಯಾಸ್ ಸಿಲಿಂಡರ್ಗಳನ್ನು ನಮ್ಮ ಬಿ ಅನಸೂಚಿ ಸ್ವತ್ತಿನಲ್ಲಿರುವ ಮನೆಯಲ್ಲಿ ಇಟ್ಟು ನಂತರ ತೆಗೆದುಕೊಂಡು ಹೋಗುತ್ತಾರೆ ಎನ್ನುತ್ತಾರೆ. ಈ ವ್ಯವಹಾರವನ್ನು ನಾನು ಬೇರೆ ಜಾಗದಲ್ಲಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. **3** ನೇ ಪ್ರತಿವಾದಿಗೆ ಕುಂದಾಪುರದ ಬಳಿ ಒಂದು ಮನೆ ಮತ್ತು ಜಮೀನು ಇರುತ್ತದೆ ಎಂದರೆ ಇರಬಹುದು. ಅವರು ಯಡೂರು ಗ್ರಾಮದಲ್ಲಿ ಅನಧಿಕೃತ ಮಧ್ಯವನ್ನು ಮಾರಾಟ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**9) 4** ನೇ ಪ್ರತಿವಾದಿಯ ಹೆಸರಿನಲ್ಲಿ ಡಿ.ಆರ್ ನಂ **03** ರಲ್ಲಿ ಮನೆ ಹಾಗೂ ಜಮೀನು ಇರುತ್ತದೆ ಎಂದರೆ ಸರಿ. **4** ನೇ ಪ್ರತಿವಾದಿ ಬಿ ಅನಸೂಚಿ ಸ್ವತ್ತಿನಲ್ಲಿ ಅನಧಿಕೃತವಾಗಿ ಯಾವುದೇ ಪರವಾನಗಿ ಪಡೆಯದೇ ಮನೆ ಕಟ್ಟುತ್ತಿದ್ದ ಬಗ್ಗೆ ಗಲಾಟೆಯಾಗಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಾದಿಗಳು ತಕರಾರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. **4** ನೇ ಪ್ರತಿವಾದಿ ಮಾಡುವ ಯಾವುದೇ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**10)5** ನೇ ಪ್ರತಿವಾದಿ ಹೆಸರಿನಲ್ಲಿ ದಾವಾ ಸ್ವತ್ತನ್ನು ಹೊರುತಪಡಿಸಿ ಡಿ.ಆರ್ ನಂ **42, 68/1** ಹಾಗೂ **68/2** ರಲ್ಲಿ ಮೂರು ಪ್ರತ್ಯೇಕ ಸ್ವತ್ತುಗಳು ಇರುತ್ತದೆ ಎಂದರೆ ಸರಿ. ಅದೇ ರೀತಿಯಲ್ಲಿ ಅವರ ಹೆಸರಿನಲ್ಲಿ ಹೊಸನಗರದಲ್ಲಿ ಮನೆ ಹಾಗೂ ಎರಡು ಕಡೆ ಜಮೀನು ಇರುತ್ತದೆ ಎಂದರೆ ಸರಿ. ಅವರು ಹೆಚ್.ಪಿ ಗ್ಯಾಸ್ ಏಜೆನ್ಸಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದ **3** ನೇ ಪುಟದಲ್ಲಿ ಸೂರ್ಯನರಾಯಣ ಭಟ್ , ಚಂದ್ರಹಾಸ ಹಾಗೂ ವಾದಿಯವರು **5** ನೇ ಪ್ರತಿವಾದಿಗೆ ಒಂದು ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರವನ್ನು ನಾನು ನೀಡಿದ ಮಾಹಿತಿಯ ಮೇರೆಗೆ ಹಾಗೂ ನೀಡಿದ ದಾಖಲಾತಿಗಳ ಆಧಾರದಲ್ಲಿ ಬರೆದಿರುತ್ತಾರೆ. ಆ ರೀತಿ **5** ನೇ ಪ್ರತಿವಾದಿಗೆ ಸೂರ್ಯನಾರಾಯಣಭಟ್ ಹಾಗೂ ಇತರರು ಸ್ವತ್ತು ಮಾರಾಟ ಮಾಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪ್ರಮಾಣಪತ್ರದಲ್ಲಿ **1** ಮತ್ತು **2** ನೇ ಪ್ರತಿವಾದಿಗೆ ಸ್ವತ್ತುಗ್ಳನ್ನು ಮಂಜೂರು ಮಾಡಿರುತ್ತಾರೆ ಎಂದು ಹೇಳಿ ಬರೆಸಿರುವುದಿಲ್ಲ ಆ ರೀತಿ ಯಾವುದೇ ಮಂಜೂರಾತಿ ಆಗಿರುವುದಿಲ್ಲ. **4** ನೇ ಪ್ರತಿವಾದಿ ಯಾವಾಗ ಮನೆ ನಿರ್ಮಾಣ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**11)**ನಿಡಿ:**31** ನ್ನು ನಾವು ದಾವಾ ಬಿ ಅನಸೂಚಿ ಸ್ವತ್ತಿನಲ್ಲಿ ವಾಸವಿರುತ್ತೇವೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ಆ ದಾಖಲೆಯಲ್ಲಿ ಎಷ್ಟು ವಿಸ್ತೀರ್ಣದ

ಸ್ವತಿನಲ್ಲಿ ವಾಸ ಇರುತ್ತೇವೆ ಎಂದು ಇರುವುದಿಲ್ಲ ಎಂದರೆ ಸರಿ. ನಾವು **1** ರಿಂದ **6** ನೇ ಪ್ರತಿವಾದಿಯರು ಎಷ್ಟು ವಿಸ್ತೀರ್ಣದ ಸ್ವತ್ತಿನಲ್ಲಿ ಹಾಗೂ ಯಾವ ಚಕ್ಕು ಬಧಿಯ ಸ್ವತ್ತಿನಲ್ಲಿ ವಾಸವಿರುತ್ತೇವೆ ಎಂದು ತೋರಿಸಲು ನಿಡಿಃ**28** ನ್ನು ಹೊರತುಪಡಿಸಿ ಬೇರೆ ಯಾವುದೇ ಅಧಿಕೃತ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಮಾನ್ಯಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸೂರ್ಯನಾರಾಯಣ ಭಟ್ರವರಿಗೆ **4** ಎ-**11** ಗುಂಟೆ ಸ್ವತ್ತಿನ ಒಡೆತನ ನಿಪಿಃ**3** ರಂತೆ ಲಭಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶ **2011** ನೇ ಸಾಲಿನಲ್ಲಿ ಆದ ನಂತರ ಹದ್ ಬಸ್ತು ಮಾಡಿದ ನಂತರ ನಾವು ದಾವಾ ಬಿ ಅನಸೂಚಿ ಸ್ವತ್ತಿನ ಒತ್ತುವರಿ ಮಾಡಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

**12)** ನನಗೆ ಸುಳುಗೋಡು ಗ್ರಾಮ ಯಾವುದು ಹಾಗೂ ಯಡೂರು ಗ್ರಾಮ ಯಾವುದು ಎಂದು ಸ್ಪಷ್ಟವಾಗಿ ಗೊತ್ತಿರುತ್ತದೆ. ದಾವಾ ಬಿ ಅನುಸೂಚಿ ಸ್ವತ್ತು ಸುಳುಗೋಡು ಗ್ರಾಮದಲ್ಲಿ ಇರುತ್ತದೆ. ಮೊದಲು ಯಡುಊರು ಹಾಗೂ ಸುಳುಗೋಡು ಗ್ರಾಮ ಪಂಚಾಯಿತಿ ಒಟ್ಟಿಗೆ ಇದ್ದ ಕಾರಣ ನನ್ನ ಪ್ರಮಾಣಪತ್ರದಲ್ಲಿ ಯಡೂರು ಸುಳುಗೋಡು ಗ್ರಾಮ ಪಂಚ್ಯಾಯತ್ ಎಂದು ಬರೆಸಿರುತ್ತೇನೆ. ದಾವಾ ಬಿ ಅನುಸೂಚಿ ಸ್ವತ್ತು ಸುಳಗೋಡು ಗ್ರಾ.ಪಂಚಾಯತ್ ವಾಪ್ತಿಯಲ್ಲಿ ಬರುತ್ತಿದೆ ಎಂದು ಗೊತ್ತಿದ್ದರೂ ಸಹ ನಿಡಿಃ**10** ರಿಂದ ನಿಡಿಃ**27** ರ ಆದೇಶದಲ್ಲಿ ಯಡೂರು ಗ್ರಾಮ ಪಂಚಾಯತ್ ಎಂದು ಇರುವುದರಿಂದ ದಾವಾ ಸ್ವತ್ತನ್ನು ಸದರಿ ದಾವೆಯ ಸ್ವತ್ತು ಎಂದು ಹೇಳಲು ನಾನು ಆ ರೀತಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾದಿ **4** ಎ-**11** ಗುಂಟೆ ಸ್ವತ್ತಿನ ಒಡೆತನವನ್ನು ನ್ಯಾಯಾಲಯದ ಆದೇಶದ ಪ್ರಕಾರ ಹೊಂದಿರುವುದನ್ನು ನಾವು ಇದುವರೆಗೂ ಪ್ರಶ್ನಿಸಿರುವುದಿಲ್ಲ ಎಂದರೆ ನಮಗೆ ಆ ವಿಚಾರ ಗೊತ್ತಿರಲಿಲ್ಲ ಎನ್ನುತ್ತಾರೆ. ಸದರಿ ಆದೇಶ ಆದ ನಂತರ ನಾವು ಅನಧಿಕೃತವಾಗಿ ಒತ್ತುವರಿ ಮಾಡಿರುವ ವಿಚಾರ ಗೊತ್ತಾಗಿದ್ದರೂ ಸಹ ಸದರಿ ಅನಧಿಕೃತ ಸ್ವಾಧೀನ ಹೊಂದಿರುವ ಸ್ವತ್ತುಗಳನ್ನು ಕಾನೂನುಬಾಹಿರವಾಗಿ ಉಳಿಸಿಕೊಳ್ಳಬೇಕೆಂಬ ಕಾರಣಕ್ಕೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **6** ನೇ ಪ್ರತಿವಾದಿಗೆ ಸಹ ಸ್ವತ್ತಿನ ಬಗ್ಗೆ ಯಾವುದೇ ಅಧಿಕೃತ ದಾಖಲೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಬಿ ಅನುಸೂಚಿ ಸ್ವತ್ತಿನ ಸ್ವಾಧೀನ ಪಡೆದುಕೊಳ್ಳಲು ವಾದಿಗಳು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಿಸಲಾಯ್ತು.)**

**(ಸಾಕ್ಷಿಗೆ ಓದಿ , ತಿಳಿಸಿ ಹೇಳಿದಾಗ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ .)**

(ಪುಷ್ಪಲತಾ ಕೆ.)
ಹಿರಿಯ ವ್ಯವಹಾರ ನ್ಯಾಯಾಧೀಶರು,
ಹೊಸನಗರ .